ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ 61/2023**

ಪ್ರ.ವ.ಬೋ.ತಾಃ 24-02-2026

ಚಾಸಾಃ 3 ಪ್ರಾಸಾಃ 2

| | |
|---|---|
| ಸಾಕ್ಷಿಯ ಹೆಸರು | ರಾಜೇಂದ್ರ |
| ತಂದೆ/ ಗಂಡನ ಹೆಸರು | ನಾಗರಾಜು.ಬಿ. |
| ವಯಸ್ಸು | 36 ವರ್ಷ |
| ವೃತ್ತಿ | ಲೆಕ್ಕಪತ್ರ ವ್ಯವಸ್ಥಾಪಕರು, ತಾಲ್ಲೂಕು ಆರೋಗ್ಯ ಕೇಂದ್ರ, ಮಧುಗಿರಿ |
| ವಾಸ | ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು 2013 ರಿಂದ ಇಲ್ಲಿಯವರೆಗೆ ಲೆಕ್ಕಪತ್ರ ವ್ಯವಸ್ಥಾಪಕರಾಗಿ ತಾಲ್ಲೂಕು ಆರೋಗ್ಯ ಕೇಂದ್ರ ಮಧುಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ದಿಃ 24.07.2023 ರಂದು ನಮ್ಮ ಕಚೇರಿಯಲ್ಲಿ ಕಳ್ಳತನವಾದ ಸಂಬಂಧವಾಗಿ ನಾನು ಮತ್ತು ಚಾಸಾ.2 ರವರ ಆ ದಾಖಲೆಗೆ ಸಹಿ ಮಾಡಿರುತ್ತೇವೆ. ನಮ್ಮ ಕಚೇರಿಯಲ್ಲಿ ಗಣಕಯಂತ್ರಕ್ಕೆ ಸಂಬಂಧಪಟ್ಟ ಎರಡು ಮೌಸ್ ಗಳು, ಒಂದು ಕೀ ಬೋರ್ಡ್,

5 ಪವರ್ ಕೇಬಲ್, ಒಂದು ಬಯೋಮೆಟ್ರಿಕ್ ಯಂತ್ರ ಮತ್ತು 2 ಕಂಪ್ಯೂಟರ್ ಯು.ಪಿ.ಎಸ್. ಗಳು ಕಳ್ಳತನವಾಗಿದ್ದ ಸಂಬಂಧ ಪೊಲೀಸರು ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಘಟನಾ ಸ್ಥಳವನ್ನು ಚಾಸಾ.1 ರವರು ತೋರಿಸಿದರು. ಆ ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಮಾಡಿದರು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದರು. ಆ ಫೋಟೋವನ್ನು ನಿಪಿ.4 ಎಂದು ಗುರುತಿಸಲಾಯಿತು. ಈಗ ತೋರುತ್ತಿರುವ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ದಿಃ 25.07.2023 ರಂದು ಆರೋಪಿಯ ಗುಡಿಸಲಿನ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.4 ಮತ್ತು 5 ರವರು ಇದ್ದರು. ಆ ಗುಡಿಸಲನ್ನು ಆರೋಪಿ ತೋರಿಸಿದ್ದು, ಆ ಗುಡಿಸಲಿನಲ್ಲಿ ಒಂದು ಟವಲ್ ನಲ್ಲಿ ಎರಡು ಮೌಸ್ ಗಳು, ಒಂದು ಕೀ ಬೋರ್ಡ್, 5 ಪವರ್ ಕೇಬಲ್, ಒಂದು ಬಯೋಮೆಟ್ರಿಕ್ ಯಂತ್ರ ಮತ್ತು 2 ಕಂಪ್ಯೂಟರ್ ಯು.ಪಿ.ಎಸ್. ಗಳು, ಒಂದು ಟವಲ್ ಮತ್ತು ಕಬ್ಬಿಣದ ಇಕ್ಕಳವನ್ನು ಬಚ್ಚಿಟ್ಟಿದ್ದು, ಅವುಗಳನ್ನು ಅಮಾನುತ್ತಪಡಿಸಿಕೊಂಡು ಅಮಾನತ್ತು ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಆ ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಬರೆದರು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದರು. ಆ ಫೋಟೋವನ್ನು ನಿಪಿ.6 ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಂಡ ಎರಡು ಮೌಸ್ ಗಳು, ಒಂದು ಕೀ ಬೋರ್ಡ್, 5 ಪವರ್ ಕೇಬಲ್, ಒಂದು ಬಯೋಮೆಟ್ರಿಕ್ ಯಂತ್ರ ಮತ್ತು 2 ಕಂಪ್ಯೂಟರ್ ಯು.ಪಿ.ಎಸ್. ಗಳನ್ನು ಮು.ಮಾ.01 ರಿಂದ 11 ಎಂದು ಈಗಾಗಲೇ ಗುರುತಿಸಲಾಗಿದೆ.

(ಆದರೆ ಸಿ.ಪಿ.ಯು. ಅನ್ನು ಪಿ.ಎಫ್.ನಲ್ಲಿ ನಮೂದಿಸಿರುವುದಿಲ್ಲ, ಈ ಬಗ್ಗೆ ಆ ಸಿ.ಪಿ.ಯು.ವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ) ಆ ದಿನ ಅಮಾನತ್ತುಪಡಿಸಿಕೊಂಡು ಆ ಟವಲ್ ಮತ್ತು ಕಬ್ಬಿಣದ ಇಕ್ಕಳವನ್ನು ಈಗ ನೋಡುತ್ತಿದ್ದು, ಆ ಟವಲ್ ನ್ನು ಮು.ಮಾ.12 ಎಂದು ಮತ್ತು ಆ ಕಬ್ಬಿಣದ ಇಕ್ಕಳವನ್ನು ಮು.ಮಾ.13 ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ವಿಡಿಯೋ ಕಾನ್ಫರೆನ್ಸ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 24.07.2023 ರಂದು ಮಾಡಲಾದ ನಿಪಿ.2 ರಂತಹ ಸ್ಥಳ ಪಂಚನಾಮೆಯನ್ನು ಮಧ್ಯಹ್ನ 1.00 ರಿಂದ 2.00 ಗಂಟೆಯವರೆಗೆ ಬರೆದರು ಎಂದರೆ ಸರಿ. ದಿಃ 25.07.2023 ರಂದು ಮಾಡಲಾದ ನಿಪಿ.5 ರಂತಹ ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ಷ 12.30 ರಿಂದ 1.30 ಗಂಟೆಯವರೆಗೆ ಬರೆದರು ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿತರ ಪರವಾಗಿಃ ಶ್ರೀ. ಹೆಚ್.ಟಿ.ಟಿ. ವಕೀಲರಿಂದಃ-**

ಆ ದಿನ ಪೊಲೀಸರು ಸ್ಥಳ ಪಂಚನಾಮೆಗೆ ನನ್ನನ್ನು ಕರೆದಿದ್ದು, ಸಹಕರಿಸಿರುತ್ತೇನೆ. ಪೊಲೀಸರು ನನ್ನನ್ನು ಸ್ಥಳಕ್ಕೆ ಬರುವಂತೆ ಮೌಖಿಕವಾಗಿ ತಿಳಿಸಿದ್ದರು. ಆ ಸಮಯದಲ್ಲಿ ನಮ್ಮ ಮೇಲಾಧಿಕಾರಿಗಳು ಸಹ ಆ ಸ್ಥಳದಲ್ಲಿ ಇದ್ದ ಕಾರಣ ನಾನು ಈ ವಿಷಯವನ್ನು ನಾನು ನಮ್ಮ

ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ನಮ್ಮ ಮೇಲಾಧಿಕಾರಿಗಳೂ ಸಹ ತನಿಖೆಗೆ ಸಹಕರಿಸುವಂತೆ ಅನುಮತಿ ಪತ್ರ ನೀಡಿರುವುದಿಲ್ಲ ಸ್ಥಳ ಪಂಚನಾಮೆಯ ಕಾಲಕ್ಕೆ ನಮ್ಮ ಕಚೇರಿಯಲ್ಲಿ ಸುಮಾರು 5 ರಿಂದ 6 ಜನರು ಇದ್ದರು. ಆ ಸಮಯದಲ್ಲಿ ಸುಮಾರು ಆ ಸ್ಥಳದಲ್ಲಿದ್ದ 4 ಜನರ ಸಹಿ ಪಡೆದರು. ನಮ್ಮ ಕಚೇರಿಯ ಕಡೆಯಿಂದ ಸುಮಾರು 4 ಜನ ಸಹಿ ಮಾಡಿದರು, ಅವರುಗಳೆಂದರೆ ನಾನು, ಮಹೇಶ್, ಮಂಜುನಾಥ ಮತ್ತು ನವೀನ ಎಂಬುವವರಾಗಿರುತ್ತೇವೆ. ಆ ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಆ ಪಂಚನಾಮೆ ಬರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಮ್ಮ ಕಚೇರಿಯ ಎಲ್ಲಾ ಸಿಬ್ಬಂದಿಯವರು ಆ ಸ್ಥಳ ಪಂಚನಾಮೆಗೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತೇವೆ. ಆ ಸ್ಥಳ ಪಂಚನಾಮೆಗೆ ನಾನು 2 ನೇ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಆ ಅಮಾನತ್ತು ಪಂಚನಾಮೆಯ ಕಾಲಕ್ಕೆ ನಾನೇ ಆ ಸ್ಥಳಕ್ಕೆ ಹೋಗಿದ್ದೆನು. ಆ ಸ್ಥಳದಲ್ಲಿ ಸುಮಾರು 15 ಗುಡಿಸಲುಗಳು ಇದ್ದವು. ಅಮಾನತ್ತು ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂಧಿ ನನಗೆ ಈಗ ಹೇಳಲಾಗುವುದಿಲ್ಲ. ಆ ಮುದ್ದೆ ಮಾಲುಗಳನ್ನು ಆ ಗುಡಿಸಲಿನ ಯಾವ ಭಾಗದಿಂದ ತಂದರು ಎಂಬುದನ್ನು ಈಗ ನನಗೆ ಹೇಳಲಾಗುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಆ ಗುಡಿಸಲಿನಲ್ಲಿ ಯಾರೂ ಸಹ ವಾಸವಿರಲಿಲ್ಲ. ಪೊಲೀಸರು ಆ ಗುಡಿಸಲಿನ ಅಕ್ಕಪಕ್ಕದವರ ಸಹಿ ಪಡೆದುಕೊಂಡಿರುವುದಿಲ್ಲ. ಅಮಾನತ್ತುಪಡಿಸಿಕೊಂಡ ವಸ್ತುಗಳು ನಮ್ಮ ಕಚೇರಿಗೆ ಸೇರಿದವು ಎಂಬ ಬಗ್ಗೆ ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿರುವುದಿಲ್ಲ.

ಅಮಾನತ್ತು ಪಂಚನಾಮೆಯ ಕಾಲಕ್ಕೆ ಸ್ಥಳಕ್ಕೆ ಹೋಗಲು ನಮ್ಮ ಮೇಲಾಧಿಕಾರಿಗಳ ಮೌಖಿಕ ಆದೇಶ ಪಡೆದುಕೊಂಡಿರುತ್ತೇನೆ. ಆ ದಿನ ಪೊಲೀಸರು ಯಾವುದೇ ವಸ್ತುಗಳನ್ನು ನನ್ನ

ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ, ನಾನು ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ25.07.2023 ರಂದು ಪೊಲೀಸ್ ಇನ್ಸ್‌ಪೆಕ್ಟರ್ ರವರ ಮುಂದೆ ನಮ್ಮ ಕಚೇರಿಯಲ್ಲಿ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಅಮಾನತ್ತು ಪಂಚನಾಮೆಯನ್ನು ನಮ್ಮ ಕಚೇರಿಯಲ್ಲಿ ಬೆರಳಚ್ಚು ಮಾಡಿ ಪ್ರಿಂಟ್ ತೆಗೆದುಕೊಂಡು. ಆರೋಪಿ ಯಾವುದೇ ಕಳ್ಳತನ ಮಾಡದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಧುಗಿರಿಯ ಪುರಸಭೆಯಲ್ಲಿ ಸ್ಕಾವೆಂಜರ್ ಆಗಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ, ಅಮಾನತ್ತು ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ